FEBRUARY 25, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಕಲ್ಯಾಣ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳಲ್ಲಿ,** ಉದ್ಯೋಗ ಆಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡುವ ಉದ್ದೇಶದಿಂದ, ಕಲಬುರಗಿ ವಿಶ್ವವಿದ್ಯಾಲಯದ ಆವರಣದಲ್ಲಿ, 120 ಕೋಟಿ ರೂಪಾಯಿ ಅನುದಾನದ, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ– ಜಿಟಿಟಿಸಿ– ಬಹು ಕೌಶಲ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಜಾಗತಿಕ, ಸ್ಪರ್ಧಾತ್ಮಕ ಉದ್ಯಮ ವಲಯದಲ್ಲಿ, ಯುವಜನತೆಗೆ ತರಬೇತಿ ನೀಡಿ, ಕೌಶಲ ಒದಗಿಸುವುದು ಸರ್ಕಾರ ಹಾಗೂ ಸಂಸ್ಥೆಯ ಗುರಿಯಾಗಿದೆ ಎಂದು ಸಚಿವರು ತಮ್ಮ ಎಕ್ಸ್ ಖಾತೆ ಮೂಲಕ ತಿಳಿಸಿದ್ದಾರೆ.

<><><>

**ಇಂದು, ಕನ್ನಡನಾಡಿನ ಏಕೀಕರಣದ ರೂವಾರಿ,** ಕರ್ನಾಟಕ ಕುಲಪುರೋಹಿತ ಎಂದೇ ಖ್ಯಾತನಾಮರಾದ, ಆಲೂರು ವೆಂಕಟರಾವ್ ಅವರ ಪುಣ್ಯತಿಥಿ. ಕನ್ನಡದ ಏಕೀಕರಣದ ಹೋರಾಟಗಳಲ್ಲಿ ಸಕ್ರಿಯರಾಗಿದ್ದ, ಆಲೂರು ವೆಂಕಟರಾಯರು, ಬರಹಗಾರರಾಗಿ, ಪತ್ರಿಕಾ ಸಂಪಾದಕರಾಗಿ ಕನ್ನಡ ನಾಡು ನುಡಿಗೆ ಅಪೂರ್ವ ಸೇವೆ ಸಲ್ಲಿಸಿದ್ದರು. ಆಲೂರ ವೆಂಕಟರಾವ್, ಅವರು ನಾಡಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಿರುವ, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ, 'ಕನ್ನಡ ಭಾಷೆ ಹಾಗೂ ಕನ್ನಡ ನಾಡಿನ ಮೇಲೆ ಆಲೂರು ಅವರಿಗಿದ್ದ ಅಭಿಮಾನ ಹಾಗೂ ಭಕ್ತಿ ಎಲ್ಲರಿಗೂ ಸದಾ ಸ್ಫೂರ್ತಿಯಾಗಿದೆ' ಎಂದು ಬಣ್ಣಿಸಿದ್ದಾರೆ.

<><><>

**ಧಾರವಾಡ ನಗರದ, ಆಲೂರು ವೆಂಕಟರಾವ್** ಸಾಂಸ್ಕೃತಿಕ ಭವನದಲ್ಲಿ, ಆಲೂರು ವೆಂಕಟರಾವ್ ಅವರ 62 ನೇ ಪುಣ್ಯ ಸ್ಮರಣೆ ಹಿನ್ನೆಲೆ, ಸ್ಮರಣೋತ್ಸವ ಕಾರ್ಯಕ್ರಮ ಆಯೋಜಿಸಲಾಯಿತು. ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಿರಿಯ ಸಾಹಿತಿ ಬಾಳಣ್ಣ ಶೀಗೇಹಳ್ಳಿ ವಿಶೇಷ ಉಪನ್ಯಾಸ ನೀಡಿದರು.

<><><>

**ಹಂಪಿ ಕನ್ನಡ ವಿಶ್ವವಿದ್ಯಾಲಯ** ಪರಂಪರೆ ಹಾಗೂ ಆಧುನಿಕ ಶಿಕ್ಷಣವನ್ನು ಮೇಳೈಸಿಕೊಂಡು ವಿಶಿಷ್ಟತೆಯಿಂದ ಕೂಡಿದೆ, ಸಂಶೋಧನಾ ಕೃತಿಗಳನ್ನು ಪ್ರಸಾರಂಗದ ಮೂಲಕ ಪ್ರಕಟಿಸಿ, ವಿದ್ವತ ವರ್ಗ ಸೇರಿದಂತೆ ಯುವ ಸಮೂಹವನ್ನು ತಲುಪುತ್ತಿದೆ ಎಂದು, ರಾಜ್ಯಪಾಲರಾದ ಥಾವರಚಂದ ಗೆಹ್ಲೋಟ್ ಹೇಳಿದರು. ವಿಶ್ವವಿದ್ಯಾಲಯದ 34 ನೇ ಘಟಿಕೋತ್ಸವ ನುಡಿಹಬ್ಬದಲ್ಲಿ, 123 ಅಭ್ಯರ್ಥಿಗಳಿಗೆ ಸ್ನಾತಕೋತ್ತರ, 107 ಅಭ್ಯರ್ಥಿಗಳಿಗೆ ಪಿ.ಎಚ್.ಡಿ ಹಾಗೂ ಮೂರು ಜನ ಸಾಧಕರಿಗೆ ನಾಡೋಜ ಗೌರವ ಪ್ರದಾನಿಸಿ ಅವರು ಮಾತನಾಡಿದರು.

<><><>

**ರಾಜ್ಯಪಾಲ ಥಾವಚಂದ್ ಗೆಹ್ಲೋಟ 38 ಸೆಕೆಂದುಗಳು**

<><><>

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ** ಮಂಡಳಿ, ಈ ತಿಂಗಳ 28 ರಿಂದ ಮಾರ್ಚ್ 17 ರ ವರೆಗೆ, 2026 ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ–1 ಆಯೋಜಿಸಿದೆ. ಬೆಂಗಳೂರು ಉತ್ತರ ಹಾಗೂ ದಕ್ಷಿಣದ ಒಟ್ಟು 42 ಪರೀಕ್ಷಾ ಕೇಂದ್ರಗಳಲ್ಲಿ, ಪರೀಕ್ಷೆಗಳನ್ನು ಸುಗಮ ಹಾಗೂ ವ್ಯವಸ್ಥಿತವಾಗಿ ನಡೆಸುವ ಉದ್ದೇಶದಿಂದ, ಪರೀಕ್ಷಾ ದಿನಗಳಂದು, ಪರೀಕ್ಷಾ ಕೇಂದ್ರಗಳ ಸುತ್ತ, 200 ಮೀಟರ್ ಪ್ರದೇಶವನ್ನು ನಿಷೇಧಿತ ಸ್ಥಳವೆಂದು ಘೋಷಿಸಿರುವುದಾಗಿ, ಬೆಂಗಳೂರು ನಗರ, ಪೊಲೀಸ್ ಆಯುಕ್ತ ಸಿಮಂತ ಕುಮಾರ ಸಿಂಗ್ ತಿಳಿಸಿದ್ದಾರೆ.

<><><>

**ಶಿವಮೊಗ್ಗ ಜಿಲ್ಲೆಯ 41 ಪರೀಕ್ಷಾ** ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳು ಸುಗಮವಾಗಿ ನಡೆಸಲು ಜಿಲ್ಲಾಡಳಿತ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಹೇಳಿದ್ದಾರೆ.

<><><>

**ಶಿವಮೊಗ್ಗ, ವಿದ್ಯಾನಗರದ ಎಫ್.ಎಂ ಪ್ರೇಷಕ ಕೇಂದ್ರದಲ್ಲಿ** ನಾಳೆ, 26 ರಂದು, ಮಧ್ಯಾಹ್ನ 12.30 ಕ್ಕೆ, 10 ಕಿಲೋವ್ಯಾಟ್ ಸಾಮರ್ಥ್ಯದ ಎಫ್.ಎಂ ಟ್ರಾನ್ಸಮಿಟರ, ಪ್ರೇ ೕಕದ ಉದ್ಘಾಟನಾ ಸಮಾರಂಭ ಜರುಗಲಿದೆ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾಕ್ಟರ ಎಲ್. ಮುರುಗನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

<><><>

**ಹುಬ್ಬಳ್ಳಿಯ ರಾಜ ನಗರದ, ಕೆ.ಎಸ್.ಸಿ.ಎ** ಮೈದಾನದಲ್ಲಿ, ಆಯೋಜಿತ, ರಣಜಿ ಟ್ರೋಫಿ, ಕ್ರಿಕೆಟ್ ಫೈನಲ್ ಪಂದ್ಯದ, ಎರಡನೇ ದಿನವಾದ ಇಂದು, ಪ್ರಥಮ ಇನ್ನಿಂಗ್ಸ್ ನಲ್ಲಿ ಜಮ್ಮು ಕಾಶ್ಮೀರ ತಂಡ, ಇತ್ತೀಚಿನ ವರದಿ ಬಂದಾಗ 4 ವಿಕೆಟ್ ಗಳ ನಷ್ಟಕ್ಕೆ 364 ರನ್ ಕಲೆ ಹಾಕಿದೆ. ಕರ್ನಾಟಕ ತಂಡದ ಪರ ಪ್ರಸಿದ್ಧ ಕೃಷ್ಣ, 59 ರನ್ ನೀಡಿ 3 ವಿಕೆಟ್ ಪಡೆದಿದ್ದಾರೆ.

<><><>

**ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು,** ಹೊನ್ನೇಸರದ ಚರಕ ಸಂಘಕ್ಕೆ, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದಿಂದ 'ಅತ್ಯುತ್ತಮ ರಾಷ್ಟ್ರೀಯ ಬ್ರ್ಯಾಂಡ್ ನಿರ್ಮಾಣ ಪ್ರಶಸ್ತಿ' ದೊರೆತಿದೆ. ಹೊಸದಿಲ್ಲಿಯಲ್ಲಿ ಆಯೋಜಿತ, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ 43 ನೇ ಸ್ಥಾಪನಾ ದಿನಾಚರಣೆಯಲ್ಲಿ, ಕೇಂದ್ರ ಜವಳಿ ಖಾತೆ ಸಚಿವ, ಗಿರಿರಾಜ ಸಿಂಗ್ ಅವರು, ಪ್ರಶಸ್ತಿ ಪ್ರದಾನ ಮಾಡಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>